ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇಲ್ಲದಿದ್ದರೆ ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ.
ಆ) ಉದ್ಭವಿಸುವುದಿಲ್ಲ.
ಇ) ಇಲ್ಲ.
ಈ) ಇಲ್ಲ.
ಉ) – ಇಲ್ಲ –

ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳು ಸ್ನಾತಕ ಪದವಿ ಪಠ್ಯಕ್ರಮವನ್ನು ಪರಿಷ್ಕರಿಸಿ ಈ ವಿಷಯವನ್ನು ಅಳವಡಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಅನುದಾನ

122 : (83)

ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ)

ಅ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಒದಗಿಸಿದ ಒಟ್ಟು ಅನುದಾನವೆಷ್ಟು; ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು (ವಾರ್ಷಿಕವಾರು ವಿವರಗಳನ್ನು ನೀಡುವುದು)

ಆ) ಈ ಯೋಜನೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಪೌಷ್ಟಿಕ ಆಹಾರ ಸರಬರಾಜು ಮಾಡಲು ಯಾವ ಆಧಾರದ ಮೇಲೆ ಗುತ್ತಿಗೆ ನೀಡಲಾಗಿದೆ; ಯಾರಿಗೆ ನೀಡಲಾಗಿದೆ, ಎಷ್ಟು ವರ್ಷಗಳ ಅವಧಿಗೆ ನೀಡಲಾಗಿದೆ, ಗುತ್ತಿಗೆ ನೀಡಿಕೆಯಲ್ಲಿ ನಿಯಮ ಪಾಲಿಸಲಾಗಿದೆಯೇ? (ವಿವರ ನೀಡುವುದು)

ಇ) ಅಂಗನವಾಡಿ ಕೇಂದ್ರಗಳಲ್ಲಿ ನೀಡುತ್ತಿರುವ ಆಹಾರದಿಂದ ಮಕ್ಕಳು ಸಾವಿಗೀಡಾಗಿದ್ದಾರೆಯೇ; ಈ ಕೇಂದ್ರಗಳಲ್ಲಿರುವ ಮಕ್ಕಳು ಆಸ್ಪತ್ರೆಗೆ ದಾಖಲಾದ ಪ್ರಕರಣಗಳು ಎಷ್ಟು;

ಈ) ಕಳೆದ 3 ವರ್ಷಗಳಲ್ಲಿ ಭಾಗ್ಯಲಕ್ಷ್ಮಿ ಬಾಂಡ್‌ಗಳಿಗೆ ಒದಗಿಸಿದ ಒಟ್ಟು ಅನುದಾನವೆಷ್ಟು; (ವಾರ್ಷಿಕವಾರು ವಿವರ ನೀಡುವುದು)

ಉ) ಇದರಿಂದ ಪ್ರಯೋಜನ ಪಡೆದ ಫಲಾನುಭವಿಗಳೆಷ್ಟು; ಅಂದಾಜು ಎಷ್ಟು ಪ್ರಮಾಣದಲ್ಲಿ ಹಣ ವಿನಿಯೋಗಿಸಲಾಗಿದೆ; ಯಾವ ವರ್ಷದಿಂದ ಉಪಯೋಗ ಪಡೆಯಲಾಗುವುದು?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)

ಅ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ ಕಳೆದ 3 ವರ್ಷಗಳಲ್ಲಿ ವಾರ್ಷಿಕವಾಗಿ ಒದಗಿಸಿದ ಹಾಗೂ ಬಿಡುಗಡೆಯಾದ ಅನುದಾನದ ವಿವರ ಕೆಳಗಿನಂತಿದೆ;

(ರೂ.ಲಕ್ಷಗಳಲ್ಲಿ)

ಯೋಜನೆ	2008–09		2009–10		2010–11	
	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
ICDS Admn.	22405.15	19473.26	34327.46	33791.19	37674.6	28505.95
SNP	25646.81	25646.81	61071.08	57311.96	60934.85	60934.85

ಆ) ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಸ್ಥಳೀಯ ಮಹಿಳಾ ಮಂಡಳಿ, ಗ್ರಾಮ ಸಮುದಾಯ ಹಾಗೂ ಸ್ವಸಹಾಯ ಗುಂಪುಗಳ ಮೂಲಕ ಆಹಾರವನ್ನು ತಯಾರಿಸಿ ವಿತರಿಸಬೇಕಿತ್ತು. ಶಕ್ತಿಯುತ ಆಹಾರ, ಅಮಲೈಸ್ಡ್ ಶಕ್ತಿಯುತ ಆಹಾರ ತಯಾರಿಕೆಯು ಸಂಕೀರ್ಣತೆಯಿಂದ ಕೂಡಿದ್ದು, ಮಹಿಳಾ ಮಂಡಳಿ ಮತ್ತು ಸ್ವಸಹಾಯ ಸಂಘದ ಸದಸ್ಯರಿಗೆ ಇದರ ತಯಾರಿಕೆಯಲ್ಲಿ ತಾಂತ್ರಿಕ ಸಾಮರ್ಥ್ಯ ಇಲ್ಲದೇ ಇರುವ ಕಾರಣ ಇವರಿಗೆ ತಾಂತ್ರಿಕ ಸಾಮರ್ಥ್ಯ ನೀಡಲು ಹಾಗೂ ಯಂತ್ರೋಪಕರಣಗಳ ಉಪಯೋಗ ತರಬೇತಿ, ಆರ್ಥಿಕ ವೆಚ್ಚ ಭರಿಸಲು ಸಾಮರ್ಥ್ಯ ನಿರ್ಮಾಣಗಾರರನ್ನು ಟೆಂಡರ್ ಮೂಲಕ ಗುರುತಿಸಲಾಗಿರುತ್ತದೆ.

ಮೆ. ಕ್ರಿಸ್ಟಿಫೈಡ್ ಗ್ರಾಮ್ಸ್ ಸಂಸ್ಥೆ ಇವರನ್ನು ಟೆಂಡರ್ ಮುಖಾಂತರ ಸಾಮರ್ಥ್ಯ ನಿರ್ಮಾಣಗಾರರೆಂದು ಆಯ್ಕೆ ಮಾಡಲಾಗಿರುತ್ತದೆ.

ಬಲಸಂವರ್ಧನೆ ನೀಡುವ ಅವಧಿಯು 5 ವರ್ಷದ್ದಾಗಿರುತ್ತದೆ.

ಇ) ಅಂಗನವಾಡಿ ಕೇಂದ್ರಗಳಲ್ಲಿ ನೀಡುತ್ತಿರುವ ಆಹಾರದಿಂದ ಯಾವುದೇ ಮಕ್ಕಳು ಸಾವಿಗೀಡಾಗಿರುವುದಿಲ್ಲ.

ಅಂಗನವಾಡಿ ಕೇಂದ್ರಗಳಲ್ಲಿರುವ ಅಪೌಷ್ಠಿಕ ಮಕ್ಕಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದ ಪ್ರಕರಣಗಳ ಸಂಖ್ಯೆ: 4948, ಇವರಿಗೆ ಬಾಲ ಸಂಜೀವಿನಿ ಯೋಜನೆಯಡಿ ರೂ. 5185.24 ಲಕ್ಷಗಳ ವೆಚ್ಚ ಭರಿಸಿ ಚಿಕಿತ್ಸೆ ಕೊಡಿಸಲಾಗಿದೆ.

ಈ) ಕಳೆದ 3 ವರ್ಷಗಳಲ್ಲಿ ಭಾಗ್ಯಲಕ್ಷ್ಮಿ ಬಾಂಡ್‌ಗಳಿಗೆ ಒದಗಿಸಿದ ಒಟ್ಟು ಅನುದಾನದ ವಿವರಗಳು ಈ ಕೆಳಗಿನಂತಿರುತ್ತದೆ.

ಕ್ರಮ ಸಂಖ್ಯೆ	ಆರ್ಥಿಕ ವರ್ಷ	ಒದಗಿಸಿದ ಅನುದಾನ ರೂ. ಕೋಟಿಗಳಲ್ಲಿ
1.	2008–09	316.65
2.	2009–10	229.89
3.	2010–11	521.98

ಉ) ಇದರಿಂದ ಪ್ರಯೋಜನ ಪಡೆದ ಫಲಾನುಭವಿಗಳ ವಿವರ. ಅಂದಾಜು ವಿನಿಯೋಗಿಸಲಾಗಿರುವ ಹಣದ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಆರ್ಥಿಕ ವರ್ಷ	ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ	ವಿನಿಯೋಗಿಸಲಾದ ಹಣ ರೂ. ಕೋಟಿಗಳಲ್ಲಿ
1.	2008–09	297764	316.65
2.	2009–10	144999	229.89
3.	2010–11	284764	521.98

ಈ ಯೋಜನೆಯಡಿ ಫಲಾನುಭವಿಗಳು 18 ವರ್ಷ ಪೂರ್ಣಗೊಂಡು, ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿದ ನಂತರ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ.

Particulars of GSDP
112 : (193)

ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಅ) ವಿವಿಧ ವಲಯಗಳ ಒಟ್ಟು ರಾಜ್ಯದ ಆಂತರಿಕ ಉತ್ಪನ್ನವನ್ನು ಅಖಿಲ ಭಾರತದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದಂತೆ ವಾರ್ಷಿಕ ಹಾಗೂ ಸರಾಸರಿ ವಾರ್ಷಿಕ ಬೆಳವಣಿಗೆ ದರಗಳು ಎಷ್ಟಿವೆ (ವರ್ಷವಾರು ವಿವರಗಳನ್ನು ನೀಡಬೇಕು)

ಆ) ಕರ್ನಾಟಕದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆಯು ಎಷ್ಟಿದೆ.

ಇ) ಕೃಷಿ ವಲಯದ ಕೊಡುಗೆಯ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿದೆಯೇ

ಈ) ರಾಜ್ಯದ ಒಟ್ಟು ಆಂತರಿಕ ಒಟ್ಟು ಆಂತರಿಕ ಉತ್ಪನ್ನದಲ್ಲಿ ಈ ವಲಯದ ಕೊಡುಗೆಯು ಕಡಿಮೆಯಾಗಲು ಕಾರಣವೇನು?